ಇ) ಹಾಗಿದ್ದಲ್ಲಿ, ಯಾವುದಾದರೂ ಒಂದು ಯೋಜನೆಯನ್ನು ಕಾರ್ಯಗತಗೊಳಿಸಿ ಶಹಾಪುರ ಪಟ್ಟಣದ ನೀರಿನ ಅಭಾವವನ್ನು ಶಾಶ್ವತವಾಗಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು.

ಇ) ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಗೃಹ ನಿರ್ಮಾಣ ಸಂಸ್ಥೆಯಿಂದ ನಿರ್ಮಿಸಲಾಗಿರುವ ಮನೆಗಳು

೫೦೩೭. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗೃಹ ನಿರ್ಮಾಣ ಸಂಸ್ಥೆಯಿಂದ ೮೫-೮೬ ರಿಂದ ಈವರೆಗೆ ಪ್ರತಿ ವರ್ಷ ಎಷ್ಟು ಮನೆಗಳನ್ನು ಕಟ್ಟಿಸಿದೆ ?

ಆ) ಪ್ರಸಕ್ತ ವರ್ಷ ಇನ್ನೂ ಹಂಚಿಕೆಯಾಗದೆ ಕಟ್ಟಿಸಿದ ಮನೆಗಳು ರಾಜ್ಯದಲ್ಲಿ ಎಷ್ಟಿವೆ ? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಕಟ್ಟಿಸಿದ ಮನೆಗಳನ್ನು ಎಂದಾದರೂ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡಲಾಗಿದೆಯೇ ? ಹಾಗಿದ್ದಲ್ಲಿ ಅಂತಹ ಮನೆಗಳ ಸಂಖ್ಯೆ ತಾಲ್ಲೂಕುವಾರು ಮಾಹಿತಿ ನೀಡುವುದು ?

ಈ) ಮನೆಗಳನ್ನು ಲೋಕೋಪಯೋಗಿ ಇಲಾಖೆಗೆ ಮಾಡಿದ್ದಲ್ಲಿ ಅಥವಾ ವಹಿಸಿಕೊಟ್ಟಿದ್ದಲ್ಲಿ ತಿರುಗಿ ಪಡೆದು ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಮಾರಲು ಸಾಧ್ಯವೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) —

ಅ) ಕರ್ನಾಟಕ ಗೃಹ ಮಂಡಳಿಯು ೧೯೮೫-೮೬ ರಿಂದ ಈವರೆಗೆ ೧೧,೭೭೧ ಮನೆಗಳನ್ನು ಕಟ್ಟಿಸಿದೆ.

೧೯೮೫-೮೬	–	೩೯೨೫
೮೬-೮೭	–	೩೨೦೪
೮೭-೮೮	–	೪೪೯೬
೮೮-೮೯	–	೩೫೩
(ಆಗಸ್ಟ್‌ವರೆಗೆ)		೧೧,೭೭೧

ಆ) ಪ್ರಸಕ್ತ ವರ್ಷ ಹಂಚಿಕೆಯಾಗದೆ ಇರುವ ಮನೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ಕಟ್ಟಿಸಿದ ಮನೆಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಟ್ಟಿರುವ ಮನೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ) ಮನೆಗಳನ್ನು ಲೋಕೋಪಯೋಗಿ ಇಲಾಖೆಗೆ ಈಗಾಗಲೇ ವರ್ಗಾಯಿಸಿ ಈ ಮನೆಗಳ ಬಗ್ಗೆ ಪಾವತಿ ಮಾಡಬೇಕಾಗಿದ್ದ ಹಣದಲ್ಲಿ ಭಾಗಶಃ ಸದರಿ ಇಲಾಖೆಯು ಮಂಡಳಿಗೆ ಈಗಾಗಲೇ ತುಂಬಿರುವುದರಿಂದ ಈ ಮನೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ವಾಪಸ್ಸು ಪಡೆದು ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಮಾರಲು ಸಾಧ್ಯವಿಲ್ಲ.

ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿ ಪ್ರಸಕ್ತ ವರ್ಷ ಇನ್ನೂ ಹಂಚದಿರುವ ಕಟ್ಟಿಸಿದ ಮನೆಗಳ ಸಂಖ್ಯೆ.

	ಜಿಲ್ಲೆ	ಮನೆಗಳ ಸಂಖ್ಯೆ		
		ಇಡಬ್ಲ್ಯೂಎಸ್	ಎಲ್‌ಐಜಿ	ಎಂಐಜಿ
೧.	ಶಿವಮೊಗ್ಗ	೧೨	೧೩	—
೨.	ಹಾಸನ	೧೩೮	೪೩	—
೩.	ಚಿಕ ಮಗಳೂರು	—	೨	—
೪.	ಉತ್ತರ ಕನ್ನಡ	—	೧೦	೪
೫.	ಕೋಲಾರ	—	೩೦	—
೬.	ಮಂಡ್ಯ	—	೩	—
೭.	ಬಳ್ಳಾರಿ	೮೪	೧೭೪	—
೮.	ಮೈಸೂರು	೩೩	೧೩೪	೫೦
೯.	ಮಡಿಕೇರಿ	೨೧	೧೫	—
೧೦	ದಕ್ಷಿಣ ಕನ್ನಡ	೪	—	೮
೧೧.	ಚಿತ್ರದುರ್ಗ	೪೯	—	—
೧೨.	ಗುಲ್ಬರ್ಗ	೩೯	೧೪	೬
೧೩.	ತುಮಕೂರು	೧೦	೭	೭
	ಒಟ್ಟು	೩೯೦	೪೫೫	೭೯

ಕರ್ನಾಟಕ ಗೃಹ ಮಂಡಳಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ಪೋಲೀಸ್ ಇಲಾಖೆಗೆ ಮನೆಗಳನ್ನು ಮಂಜೂರಿಸಿಕೊಟ್ಟ ಬಗ್ಗೆ ಪಟ್ಟಿ

	ಜಿಲ್ಲೆ ತಾಲ್ಲೂಕು	ಮನೆಗಳ ಒಟ್ಟು ಸಂಖ್ಯೆ
೧.	ಕಾರವಾರ	೫೩
೨.	ಕುಮಟ	೩೨
೩.	ಹೊನ್ನಾವರ	೩೬
೪.	ಭಟ್ಕಳ	೪೬
೫.	ಅಂಕೋಲ	೪೨
೬.	ಸಿರಸಿ	೧೨೩
೭.	ಸಿದ್ದಾಪುರ	೧೦
೮.	ಹಳಿಯಾಳ, ತೆರಗಾವ್, ಯಲ್ಲಾಪುರ, ಇಡಗುಂಡಿ	೨೬
೯.	ಕುಂದರಗಿ (ಯಲ್ಲಾಪುರ ತಾಲ್ಲೂಕು)	೪
೧೦.	ಮುಂಡಗೋಡ–ಕಾಟೂರ್	೬
೧೧.	ಪೋಲೀಸ್ ಇಲಾಖೆ (ಮುಂಡುಗೋಡು)	೯
೧೨.	ದಾಂಡೇಲಿ	೨೫
೧೩.	ಕಟುಗಾಲ್	೬
೧೪.	ಹಿರಗುಪ್ಪಿ	೬
	ಒಟ್ಟು	೪೩೭